ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 27-07-2018

# ವರದಿ

## ಶಾಲಾ ಕಾಲೇಜಿನ ನಿಜವಾದ ಪಾಠ ವ್ಯಕ್ತಿತ್ವ ಸಮಗ್ರ ವಿಕಾಸ ಮಾಡುವುದು

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ವಾಗತ ಸಮಾರಂಭ ಉದ್ಘಾಟಿಸಿ – ಡಾ. ಎಂ ಪ್ರಭು

ಕೊಳ್ಳೇಗಾಲ 27-07-2018 : ವಿದ್ಯಾರ್ಥಿಗಳು ಕೇವಲ ಪುಸ್ತಕದ ಅವಲಂಬಿತರಾಗದೆ ಜಗತ್ತಿನ ಪ್ರಚಲಿತ ವಿದ್ಯಮಾನಗಳನ್ನು ಅರಿಯುತ್ತ, ಕಾಲೇಜಿನ ಒಳಗಷ್ಟೇ ಅಲ್ಲದೆ ಹೊರಗಿನ ಕಲಿಕೆಗೆ ತೆರೆದುಕೊಳ್ಳುವಂತೆ ಮಾಡಿ ವಿದ್ಯಾರ್ಥಿಗಳ ಸಮಗ್ರ ವಿಕಾಸ ಮಾಡುವುದೇ ಕಾಲೇಜಿನ ನಿಜವಾದ ಶಿಕ್ಷಣ ಎಂದು ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಪ್ರಭು ತಿಳಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ 2018-19ನೇ ಸಾಲಿಗೆ ಪ್ರವೇಶಾತಿ ಪಡೆದಿರುವ ಕಿರಿಯ ವಿದ್ಯಾರ್ಥಿನಿಯರಿಗೆ ಹಿರಿಯ ವಿದ್ಯಾರ್ಥಿನಿಯರಿಂದ ಕಿರಿಯ ವಿದ್ಯಾರ್ಥಿಗಳವರಿಗೆ ಆಯೋಜಿಸಿದ್ದ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಸಂದರ್ಶನಗಳಲ್ಲಿ, ಪ್ರವೇಶ ಪರೀಕ್ಷೆಗಳಲ್ಲಿ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ, ವಿವಿಧ ಆಪ್ಟಿಟ್ಯೂಡ್ ಟೆಸ್ಟ್‌ಗಳಲ್ಲಿ ಶಾಲಾ ಕಾಲೇಜಿನ ಪದವಿ ಶಿಕ್ಷಣಕ್ಕಿಂತ ನೆರವಾಗುವುದು ಸಾಮಾನ್ಯಶಿಕ್ಷಣ. ಸಾಮಾನ್ಯ ಶಿಕ್ಷಣದಿಂದ ಸಾಮಾನ್ಯ ಜ್ಞಾನ ಹಾಗಾಗಿ ಶಾಲಾ ಕಾಲೇಜುಗಳಲ್ಲಿ ಪಠ್ಯಕ್ರಮ ಬೋಧಿಸುವುದೊಂದೇ ಧ್ಯೇಯವಾಗಿರದೆ ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವದ ಪರಿಪೂರ್ಣ ವಿಕಸನ ಹೊಂದುವಂತೆ ಮಾಡುವುದು ಬೋಧಕರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ ಪರಿಶ್ರಮಕ್ಕೆ ಖಂಡಿತ ಪರ್ಯಾಯವಿಲ್ಲ. ವಿಷಯಗಳನ್ನು ತಿಳಿಯುವ ಹಾಗೂ ಕಲಿಯುವ ಕ್ರಿಯ ಪ್ರಯಾಸವೆನಿಸಬಾರದು. ಬದಲಿಗೆ ಮನರಂಜಕ ವೆನಿಸಬೇಕು. ಆಗ ಯಾವುದೂ ಕಷ್ಟವೆನಿಸುವುದಿಲ್ಲ. ಸದಾ ನಿಮ್ಮನ್ನು ಮೌಲ್ಯಮಾಪನ ಮಾಡುವ ಈ ಸ್ಪರ್ಧಾತ್ಮಕ ಪ್ರಪಂಚದ'ಲ್ಲಿ ಪ್ರತಿಯೊಂದೂ ಸಂದರ್ಭದಲ್ಲಿ ನಿಮ್ಮನ್ನು ನೀವೇ ಪ್ರದರ್ಶನಕ್ಕೊಡ್ಡಿಕೊಳ್ಳಬೇಕಾಗಿರುತ್ತದೆ. ಹೊರಗಿನ ಪ್ರಪಂಚದ ಸಾಮಾನ್ಯ ಜ್ಞಾನವನ್ನು ನಿಮ್ಮ ಮನೆ ಬಾಗಿಲಿಗೇ ತಲುಪಿಸುವ ದಿನಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡಲ್ಲಿ ಅರ್ಧಯುದ್ಧ ಗೆದ್ದಂತೆಯೇ. ದಿನಪತ್ರಿಕೆಗಳಂತೆಯೇ ಎಲ್ಲ ರೀತಿಯ ಮಾಧ್ಯಮಗಳನ್ನು ಗುರುಗಳ ಮಾರ್ಗದರ್ಶನದಲ್ಲಿ ಸದುಪಯೋಗ ಪಡಿಸಿಕೊಂಡಲ್ಲಿ ಉಜ್ವಲ ಭವಿಷ್ಯ ಹೊಂದಬಹುದು ಎಂದು ಕರೆ ನೀಡಿದರು.

ಪ್ರೊ ಹೆಚ್. ಜಿ ನಟರಾಜನ್, ಪ್ರೊ. ಎಂ ಬಸವರಾಜು, ಶ್ರೀಮತಿ ಎಸ್ ಮಮತ, ಶ್ರೀಮತಿ ಕೆ ಆರ್ ಉಮಾದೇವಿ, ಶ್ರೀ ಕೆ ಆರ್ ಗುರುಪ್ರಸಾದ್, ಶ್ರೀಮತಿ ಎ ಎಸ್ ಸ್ಮಿತಾ, ಸಾಂಸ್ಕೃತಿಕ ವೇದಿಕೆಯ ಸಂಚಾಲಕಿ ಶ್ರೀಮತಿ ಎನ್ ಭ್ರಮರಾಂಬ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕು.ಸಿಂದು ಸ್ವಾಗತಿಸಿ, ಕು. ಅಂಜನ ವಂದಿಸಿದರು. ಕು. ಹರ್ಷಿತಾ ಕಾರ್ಯಕ್ರಮ ನಿರೂಪಿಸಿದರು. ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಹಿರಿಯ ವಿದ್ಯಾರ್ಥಿನಿಯರಿಂದ ಕಿರಿಯ ವಿದ್ಯಾರ್ಥಿನಿಯರಿಗೆ ಸ್ವಾಗತ ಸಮಾರಂಭ' ಚಿತ್ರದಲ್ಲಿ ಶ್ರೀಮತಿ ಎ ಎಸ್ ಸ್ಮಿತಾ, ಶ್ರೀಮತಿ ಕೆ ಆರ್ ಉಮಾದೇವಿ, ಶ್ರೀ ಹೆಚ್ ಜಿ ನಟರಾಜನ್, ಪ್ರೊ. ಎಂ ಬಸವರಾಜು, ಪ್ರಾಚಾರ್ಯ ಪ್ರೊ ಉಮೇಶ, ಡಾ. ಎಂ ಪ್ರಭು, ಶ್ರೀ ಕೆ ಆರ್ ಗುರುಪ್ರಸಾದ್, ಶ್ರೀಮತಿ ಎನ್ ಭ್ರಮರಾಂಬ ಮತ್ತು ಶ್ರೀಮತಿ ಎಸ್ ಮಮತರವರನ್ನು ಕಾಣಬಹುದು.




ಕಿರಿಯ ವಿದ್ಯಾರ್ಥಿನಿಯರಿಗೆ ಹಿರಿಯ ವಿದ್ಯಾರ್ಥಿನಿಯರಿಂದ ಸ್ವಾಗತ ಸಮಾರಂಭದಲ್ಲಿ ಡಾ. ಎಂ ಪ್ರಭುರವರು ವಿದ್ಯಾರ್ಥಿನಿಯರನ್ನು ಕುರಿತು ಮಾತನಾಡುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ಎ ಎಸ್ ಸ್ಮಿತಾ, ಶ್ರೀಮತಿ ಕೆ ಆರ್ ಉಮಾದೇವಿ, ಶ್ರೀ ಹೆಚ್ ಜಿ ನಟರಾಜನ್, ಪ್ರೊ. ಎಂ ಬಸವರಾಜು, ಪ್ರಾಚಾರ್ಯ ಪ್ರೊ ಉಮೇಶ, ಶ್ರೀ ಕೆ ಆರ್ ಗುರುಪ್ರಸಾದ್, ಶ್ರೀಮತಿ ಎನ್ ಭ್ರಮರಾಂಬ ಮತ್ತು ಶ್ರೀಮತಿ ಎಸ್ ಮಮತರವರನ್ನು ಕಾಣಬಹುದು.




ಸಮಾರಂಭದಲ್ಲಿ ಭಾಗವಹಿಸಿರುವ ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು

